## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

ಸಿಸಿ ನಂ ಃ 205/2021
ಸಿಡಬ್ಲು ಃ 5
ಪಿಡಬ್ಲು ಃ 2

ಹೆಸರು ಃ ರಾಜೀವ ಸಿದ್ದಣ್ಣ ಕೋಳಿ
ವಯಾ ಃ 51 ವರ್ಷ
ಉದ್ಯೋಗ ಃ ಎ.ಎಸ್.ಐ., ರಾಜ್ಯಗುಪ್ತ ವಾರ್ತಾ, ಗೋಕಾಕ ಘಟಕ
ವಾಸ ಃ ಗೋಕಾಕ

(ದಿನಾಂಕಃ 17-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)

ಮುಖ್ಯ ವಿಚಾರಣೆ ಸಸಅಃರವರಿಂದಃ

ನಾನು 2010 ರಿಂದ 2015 ರ ವರೆಗೆ ನಾನು ಅಲಾನಿದಳ ಗೋಕಾಕನಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15-05-2013 ರಂದು ಮಧ್ಯಾಹ್ಣ 01.00 ಗಂಟೆಗೆ ನಾನು ಮತ್ತು ಪಿಸಿ 2517 , 2227 ಹುಕ್ಕೇರಿ ತಾಲೂಕಿನ ಬಸಾಪುರ ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ ಶಿವನವ್ವ ಗುರವ ಎನ್ನುವವರು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದ್ದು ಚಾಸಾ-4 ರವರು ಚಾಸಾ.1 ರವರಿಗೆ ತಿಳಿಸಿರುತ್ತಾರೆ. ಅವರು ನಮಗೆ ಇಬ್ಬರು ಪಂಚರನ್ನು ಹಾಜರುಪಡಿಸಿಕೊಂಡು ಕರಗುಪ್ಪಿ ಕ್ರಾಸನಲ್ಲಿರಲು ತಿಳಿಸಿರುತ್ತಾರೆ. ಪಿಎಸ್ಐರವರು 01.45 ಗಂಟೆಗೆ ಇಲಾಖಾ ವಾಹನದಲ್ಲಿ ಮಹಿಳಾ ಪೇದೆ ಚಾಸಾ.7 ರವರನ್ನು ಕರೆದುಕೊಂಡು ಬಂದಿರುತ್ತಾರೆ. ನಂತರ ಪಂಚರಿಗೆ ದಾಳಿ ವಿಷಯವನ್ನು ತಿಳಿಸಿ ಅವರು ಒಪ್ಪಿ ದ ಮೇರೆಗೆ ಬಸಾಪುರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಹೋಗಿ ಸ್ವಲ್ಪ ದೂರದಲ್ಲಿ ಜೀಪನ್ನು ಮರೆಯಾಗಿ ನಿಲ್ಲಿಸಿ ವಾಚ್ ಮಾಡುತ್ತಿರುವಾಗ ಕನ್ನಡ ಶಾಲೆಯ ಪಕ್ಕದಲ್ಲಿ ಒಬ್ಬ ಮಹಿಳೆ ಸಾರ್ವಜನಿಕ ಸ್ಥಳದಲ್ಲಿ ಅನುಕಮಾನಾಸ್ಪದವಾಗಿ ನಿಂತಿದ್ದಳು. ಅವಳ ಕೈಯಲ್ಲಿ ಕಪ್ಪು ಬಣ್ಣದ ಟ್ಯೂಬ ಇತ್ತು. ಬಂದ ಮಾಹಿತಿಯನ್ನು ಖಚಿತ ಪಡಿಸಿಕೊಂಡು ಆಕೆಯ ಮೇಲೆ ದಾಳಿ ಮಾಡಲಾಗಿ ಆಕೆಯ ಬಳಿ ಇದ್ದ ಸಾರ್ವಜನಿಕರು ಓಡಿ ಹೋಗಿದ್ದು ಚಾಸಾ-7 ರವರು ಸದರಿ ಮಹಿಳೆಯನ್ನು ಹಿಡಿದು ಚಾಸಾ-1 ರವರು ವಿಚಾರಣೆಗೊಳಪಡಿಸಿದಾಗ ಆಕೆ ತನ್ನ ಹೆಸರು ಶಿವನವ್ವ ಮಾರುತಿ ಗುರವ ಸಾಃ ಬಸಾಪುರ ಎಂದು ತಿಳಿಸಿರುತ್ತಾಳೆ. ಆಕೆಯ ಬಳಿ ಇದ್ದ ಕಪ್ಪು ಬಣ್ಣದ ಟ್ಯೂಬನಲ್ಲಿ ಏನಿದೆ ಎಂದು ಕೇಳಲಾಗಿ ಕಳ್ಳಬಟ್ಟಿ ಸಾರಾಯಿ ಇದೆ ಎಂದು ತಿಳಿಸಿರುತ್ತಾಳೆ. ಸದರಿ ಟ್ಯೂಬನ್ನು ಪರಿಶೀಲಸಿದಾಗ 30 ಲೀಟರಿನಷ್ಟು ಕಳ್ಳಬಟ್ಟಿ

ಸಾರಾಯಿ ಕಂಡುಬಂದಿರುತ್ತದೆ. ಘಾಟು ವಾಸನೆಯನ್ನು ಖಚಿತಪಡಿಸಿಕೊಂಡು 180 ಮಿಲಿಯ ಬಾಟಲನಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪಂಚರ ಸಹಿ ಇದ್ದ ಚೀಟಿ ಅಂಟಿಸಿ ಅರಗಿನಿಂದ ಶೀಲು ಮಾಡಲಾಯಿತು. ಅಲ್ಲಿ ಪಂಚನಾಮೆ ಮಾಡಿ ಪಂಚರ ಸಹಿ ಪಡೆದುಕೊಳ್ಳಲಾಯಿತು. ಪಂಚನಾಮೆಯನ್ನು 14.30 ರಿಂದ 15.30 ರವರೆಗೆ ಬರೆದಿರುತ್ತಾರೆ. ನಂತರ ಸಿಕ್ಕ ಆರೋಪಿ, ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಅಲಾನಿ ಠಾಣೆಗೆ ಬಂದು ಸ್ವದೂರನ್ನು ಸರಕಾರದ ಪರವಾಗಿ ಚಾಸಾ-1 ರವರು ದೂರನ್ನು ತಯಾರಿಸಿ ಠಾಣಾಧಿಕಾರಿಯವರಿಗೆ ಸಲ್ಲಿಸಿರುತ್ತಾರೆ. ಈ ವಿಚಾರವಾಗಿ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಕಳ್ಳಬಟ್ಟಿಯನ್ನು ಮಾರಾಟ ಮಾಡುತ್ತಿದ್ದ ಹೆಂಗಸನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತಳನ್ನು ನೋಡಿ ಗುರುತಿಸುತ್ತಾರೆ.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಶ್ರೀ ಆರ್ ಬಿ ಸಿ ವಕೀಲರಿಂದ ಆರೋಪಿತಳ ಪರವಾಗಿ -</u>

ನಾನು ತಜ್ಞರ ಶಿಕ್ಷಣವನ್ನು ಕಲೆತಿರುವುದಿಲ್ಲ. ಬಾತ್ಮಿ ಬಂದ ತಕ್ಷಣ ದೂರನ್ನು ದಾಖಲು ಮಾಡಿರುವುದಿಲ್ಲ. ಬಾತ್ಮಿ ಬಂದ ವ್ಯಕ್ತಿಯು ಮುಖಚೆಹರೆ ಗುರುತಿಸಲು ಯಾವುದೇ ಭಾವಚಿತ್ರ ನಮ್ಮ ಹತ್ತಿರ ಇರಲಿಲ್ಲ. ಬಸ ನಿಲ್ದಾಣದಲ್ಲಿ ಸಾಕಷ್ಟು ಜನರಿಂದ ಕೂಡಿದ ಪ್ರದೇಶ ಎಂದರೆ ಸರಿ . ರಸ್ತೆಯ ಎರಡೂ ಬಂದಿ ಸಾಕಷ್ಟು ಅಂಗಡಿಗಳಿವೆ ಎಂದರೆ ಸರಿ . ನಾವು ಹೋದಾಗ ಸ್ಥಳದಲ್ಲಿ ಕಳ್ಳಬಟ್ಟಿ ತಯಾರಿಸುವ ಸಾಮಾನುಗಳು ಕಂಡುಬಂದಿರುವುದಿಲ್ಲ, ಆದರೆ ಕಳ್ಳಬಟ್ಟಿ ಕಂಡುಬಂದಿರುತ್ತದೆ.

ರಬ್ಬರ ಟ್ಯೂಬ ಯಾವ ವಾಹನದ್ದು ಮತ್ತು ಯಾವ ಕಂಪನಿಯದ್ದು ಎಂದು ಹೇಳಲಾಗುವುದಿಲ್ಲ. ನಾವು ದಾಳಿಗೆ ಹೋದ ದಿನ ಜೀಪ ಚಾಲಕ ಅಶೋಕ ಗಸ್ತಿ ಇದ್ದರು. ಚಾಸಾ.2 ಮತ್ತು 3 ಬೇರೆ ಬೇರೆ ಗ್ರಾಮದವರು ಎಂದರೆ ಸರಿ . ಚಾಸಾ.1 ರವರು ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ . ನಮ್ಮ ಮೇಲಾಧಿಕಾರಿಗಳಿಗೆ ಎಸ್‌ಪಿರವರು ಪ್ರತಿ ತಿಂಗಳು ಸಭೆ ಕರೆಯುತ್ತಾರೆ ಎಂದರೆ ಸರಿ . ಸಭೆಯಲ್ಲಿ ವರ್ಷಕ್ಕೆ

ಇಂತಿಷ್ಟು ಕೇಸನ್ನು ದಾಖಲಿಸಬೇಕೆಂದು ನಿರ್ದೇಶನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮು.ಮ.1 ರಂತಹ ವಸ್ತುಗಳು ಸಾಮಾನ್ಯವಾಗಿ ಸಿಗುವಂತಹ ವಸ್ತುಗಳು ಎಂದರೆ ಸರಿಯಲ್ಲ. ಮು.ಮಾ.1 ಬಾಟಲಿಯನ್ನು ನಮ್ಮ ಜೀಪಿನಲ್ಲಿ ತಂದಿರುತ್ತೇವೆ. ದಾಳಿ ಕಿಟ್ ತರಬೇಕಾದರೆ ಸರ್ಕಾರಕ್ಕೆ ಮಾಹಿತಿ ಕೊಡಬೇಕಾಗುತ್ತದೆ ಎಂದರೆ ಸರಿ . ಆ ರೀತಿ ಸರ್ಕಾರಕ್ಕೆ ಇಂಡೆಂಟ ಹಾಕಿದ ಬಗ್ಗೆ ದಾಖಲಾತಿಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ. ಸ್ಥಳದಲ್ಲಿ ವಿಚಾರಿಸಿದ ವ್ಯಕ್ತಿಗಳ ಹೆಸರುಗಳು ನೆನಪಿಲ್ಲ.

ದಿನಾಂಕ 15-05-2013 ರಂದು ಮಧ್ಯಾಹ್ನ 01.00 ಗಂಟೆಗೆ ನಾನು ಮತ್ತು ಪಿಸಿ 2517 , 2227 ಹುಕ್ಕೇರಿ ತಾಲೂಕಿನ ಬಸಾಪುರ ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ ಶಿವನವ್ವ ಗುರವ ಎನ್ನುವವರು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದ್ದು ಚಾಸಾ-4 ರವರು ಚಾಸಾ.1 ರವರಿಗೆ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಸ್ಥಳದಲ್ಲಿ ಆರೋಪಿ ಮೇಲೆ ದಾಳಿ ಮಾಡಿ ಕಳ್ಳಬಟ್ಟಿ ಸಾರಾಯಿ ಟ್ಯೂಬನ್ನು ಪಂಚರ ಸಮಕ್ಷಮ ಪಂಚನಾಮೆಯ ಮೂಲಕ ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆ ಬರೆದಿಲ್ಲ, ಠಾಣೆಯಲ್ಲಿ ಕುಳಿತು ಪಂಚನಾಮೆ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಯಲ್ಲ. ಆರೋಪಿತಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ